# ನನ್ನ ಓದು

ಈ ನೆಲದ ಸವಾಲುಗಳಲ್ಲಿ ಜನಿಸಿದ ಸ್ತ್ರೀವಾದ. ತನ್ನ ಸಮುದಾಯದ ಹೆಣ್ಣುಮಕ್ಕಳ ಬವಣೆಯನ್ನು ಕಂಡು ಅನುಭವದಿಂದ ಬರೆದ ಕೃತಿ. ಅವರ ವೈಯಕ್ತಿಕ ಬದುಕು ಪತಿಯ ಸಹಕಾರದಲ್ಲಿ ಮಹಿಳೆ ಏರಬಲ್ಲ ಎತ್ತರವನ್ನು ಪ್ರತೀಕಿಸಿದರೂ, ಎಲ್ಲ ಹೆಣ್ಣುಮಕ್ಕಳಿಗೆ ತನ್ನ ಅದೃಷ್ಟ ಹಾಗೂ ತನಗೆ ದೊರೆತ ವಿದ್ಯಾಭ್ಯಾಸದ ಅವಕಾಶ ಇಲ್ಲವೆಂಬ ಒಳಅರಿವಿನಲ್ಲಿ ಇಕ್ಬಾಲುನ್ನೀಸಾ ಬರೆಯುತ್ತಾರೆ.

1931ರಲ್ಲಿ ಇಕ್ಬಾಲುನ್ನೀಸಾ ಪರ್ದ ಧರಿಸುವುದು ನಿಲ್ಲಿಸಿದರು. ಬಹುಪತ್ನಿತ್ವವನ್ನು ವಿರೋಧಿಸಿದರು. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು, ಕೌಟುಂಬಿಕ ಹಿಂಸೆಯನ್ನು ಪ್ರಶ್ನಿಸಿದರು. ಇವು ಇಂದಿಗೂ ಪ್ರಸ್ತುತ ವಿಷಯಗಳಾಗಿ ಉಳಿದಿವೆ ಅನ್ನುವುದೇ ವಿಷಾದ. 1951ರಲ್ಲಿ ಪತಿಯೊಡನೆ ಲಂಡನ್‌ಗೆ ಹೋಗಿ ನೆಲೆಸಿದ ಇಕ್ಬಾಲುನ್ನೀಸಾ, 1954ರಲ್ಲಿ ತೀರಿಕೊಂಡರು.

## ಪರದೆಯ ಒಳಗಿನ ಬದುಕು

'ಪರ್ದಾ & ಪಾಲಿಗಮಿ', ಒಂದು ಮುಸ್ಲಿಂ ಕುಟುಂಬದ ಮಹಿಳೆಯರ ಬದುಕಿನ ಚಿತ್ರವಾದರೂ, ಸ್ವಾತಂತ್ರ್ಯಪೂರ್ವದ ಆ ಸಮಯದಲ್ಲಿ ಹಿಂದೂಗಳಲ್ಲೂ ಬಹುಪತ್ನಿತ್ವ ಕಾನೂನುಬಾಹಿರವಾಗಿರಲಿಲ್ಲ

ಹೊರಜಗತ್ತಿಗೆ ಕದ ಮುಚ್ಚಿ, ಹೆಣ್ಣುಮಕ್ಕಳ ಅರಳುವ ಅವಕಾಶಗಳನ್ನೆಲ್ಲ ಕಿತ್ತುಕೊಂಡು ಮನೆಯ ಒಳಗೆ ಕೂಡಿದಾಗ, ಪುರುಷತನದ ಸವಲತ್ತಿನಲ್ಲಿ ನಾಲ್ಕು ಪತ್ನಿಯರನ್ನು ತಂದು ಇಟ್ಟಾಗ, ಆ ಕತ್ತಲ ಜಗತ್ತಿನ ಆಧಿಪತ್ಯಕ್ಕಾಗಿ ನಡೆಯುವ ಪಿತೂರಿಗಳನ್ನು, ಅಂತರ್ ಸ್ಫೋಟಗಳನ್ನು ಇಕ್ಬಾಲುನ್ನೀಸಾ ಎವೆಮಿಟುಕಿಸದ ನೋಟದಲ್ಲಿ ನಮಗೆ ನೀಡುತ್ತಾರೆ.

'ಪರ್ದಾ & ಪಾಲಿಗಮಿ' ಮೂರು ತಲೆಮಾರುಗಳ ಸಂಪ್ರದಾಯಸ್ಥ ಮುಸ್ಲಿಂ ಕುಟುಂಬದ ಕತೆ ಹೇಳುತ್ತದೆ. ಇಡೀ ಕಾದಂಬರಿ 'ದಿಲ್ಖುಶ್' ಎಂಬ ದೊಡ್ಡ ಮನೆಯ ಒಳಾಂಗಣದಲ್ಲಿಯೇ ನಡೆಯುತ್ತದೆ. ಈ ಕಾದಂಬರಿಯ ನಾಯಕ, ಈ ಮನೆಯ ಯಜಮಾನ ಉಮರ್. ಬಹುಪತ್ನಿತ್ವದ ಗೊಂದಲಗಳ ಅರಿವಿದ್ದ ಈತನಿಗೆ ಒಬ್ಬಳೇ ಪತ್ನಿ, ಜುಹ್ರಾ. ಇಡೀ ಮನೆಯನ್ನು ತನ್ನ ಬಿಗಿಮುಷ್ಟಿಯಲ್ಲಿ ಹಿಡಿದು ಸಂಸಾರ ನಡೆಸುವ ಈತ ಪತ್ನಿ ಜುಹ್ರಾಳನ್ನು ತನ್ನ ಅಡಿಯಾಳಾಗಿ, ಗುಲಾಮಳಂತೆ ನಡೆಸಿಕೊಂಡವ. ಹೊರಗಿನ ಜಗತ್ತನ್ನು ಕಾಣುವ ಅವಕಾಶವೇ ಇಲ್ಲದೆ ಮನೆಯ ಒಳಾಂಗಣದಲ್ಲಿ, ಪರ್ದಾ ಹಿಂದೆ ಕಳೆದು ಹೋದ ಬದುಕು ಅವಳದು. ಕಾದಂಬರಿಯ ಆರಂಭದಲ್ಲಿಯೇ ಉಮರ್ ಕಾಯಿಲೆ ಬೀಳುತ್ತಾನೆ. ಕಟು ಸಂಪ್ರದಾಯವಾದಿಯಾದ ಆತ ಆಧುನಿಕ ವೈದ್ಯಕೀಯವನ್ನು ನಿರಾಕರಿಸಿ, ಸಾವನ್ನಪ್ಪುತ್ತಾನೆ.

ಈಗ ಕುಟುಂಬದ ಏಕೈಕ ಗಂಡುಸಾದ ಕಿಶೋರ ವಯಸ್ಸಿನ ಮಗ ಕಬೀರ್ ಮನೆಯ ಯಜಮಾನ. ವಿಧವೆಯಾಗಿ ಸಾಮಾಜಿಕ ಕಾರ್ಯಗಳಿಂದ ಹೊರಗಾದ ಜುಹ್ರಾ, ಇಷ್ಟು ದಿನದ ಪತಿಯ ದಬ್ಬಾಳಿಕೆಯಲ್ಲಿ ತುಳಿಯಲ್ಪಟ್ಟ ಜುಹ್ರಾ, ಇದೀಗ ಕುಟುಂಬದ ಒಳಗೇ, (ಅದೊಂದೇ ಮಹಿಳೆಯ ತಾಣವಾದ ಕಾರಣ), ಅಧಿಕಾರದ ಲಗಾಮು ಹಿಡಿಯ ಬಯಸುತ್ತಾಳೆ. ಕಹಿ ಅನುಭವಗಳು ಕಡೆದು ನಿಲ್ಲಿಸಿದ ಕಟು ವ್ಯಕ್ತಿತ್ವದ ಜುಹ್ರಾಳ ಪಾತ್ರವನ್ನು ಲೇಖಕಿ ಶಕ್ತವಾಗಿ ಕೆತ್ತಿ ನಿಲ್ಲಿಸುತ್ತಾರೆ. ಪತ್ನಿಯಾಗಿ ಮೂಲೆಗುಂಪಾದ ಈಕೆ ಏಕಾಏಕಿ ಕಬೀರನ ತಾಯಿಯಾಗಿ ತನ್ನ ಅಧಿಕಾರಯುತ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಾಳೆ. ಮನೆಯ ಹಿರಿಯಳೆಂಬ ಕಿರೀಟವನ್ನು ಗತ್ತಿನಿಂದ ತೊಟ್ಟು, ಮಗನ ಮೇಲೆ ಹಿಡಿತ ಸಾಧಿಸಲು ತವಕಿಸುತ್ತಾಳೆ.

ಅಪ್ಪನ ವ್ಯವಹಾರದ ಚತುರತೆಯಾಗಲಿ, ಕೃಪಣತನವಾಗಲೀ ಇಲ್ಲದ ಕಬೀರನಿಗೆ ಅಪ್ಪ ಮಾಡಿಟ್ಟು ಹೋದ ಆಸ್ತಿ ಮತ್ತು ಆದಾಯ ಅವನ ಸುಖ ಲೋಲುಪತೆಗೆ ದಾರಿಯಾಗುತ್ತದೆ. ಈಗ ತಾಯಿ ಮತ್ತು ಮಗನ ನಡುವೆ ನಡೆಯುವ ಅಧಿಕಾರದ ಆಟದಲ್ಲಿ, ಪಿತೂರಿಗಳಲ್ಲಿ ಆ ಮನೆಗೆ ಒಂದಾದ